# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ: 06-01-2021 ರಂದು ನಡೆದ ವಾರ್ಡ್ ಸಂಖ್ಯೆ: 114 ಅಗರಂ ವಾರ್ಡಿನ ವಾರ್ಡ್ ಸಮಿತಿ ಸಭೆಯ ನಡಾವಳಿಗಳು

ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಕಛೇರಿ ಆದೇಶದ ಸಂಖ್ಯೆ: ಬಿ12(5)ಪಿಆರ್/35/2020-21, ದಿನಾಂಕ: 21-09-2020 ರ ಆದೇಶದಂತೆ ಜನವರಿ-2020 ರ ಮಾಹೆಯ ಅಗರಂ ವಾರ್ಡಿನ ವಾರ್ಡ್ ಸಮಿತಿ ಸಭೆಯನ್ನು ಅಗರಂ ವಾರ್ಡಿನ ಗೌತಮಪುರದಲ್ಲಿರುವ ಬಿಬಿಎಂಪಿ ಸಮುದಾಯ ಭವನದಲ್ಲಿ ದಿನಾಂಕ: 06-01-2021 ರಂದು ನೆಡೆಸಲಾಯಿತು.

## ಸಭೆಗೆ ಹಾಜರಿದ್ದವರ ವಿವರಗಳು

| ಕ್ರ.ಸಂ | ಹೆಸರು | ಪದನಾಮ |
|---|---|---|
| 1 | ಶ್ರೀ. ಅವಿನಾಶ್ ಬಾಬು | ಅಧ್ಯಕ್ಷಕರು ಮತ್ತು ನೋಡಲ್ ಅಧಿಕಾರಿಗಳು |
| 2 | ಡಿ. ಮೂರ್ತಿ | ಕಾರ್ಯದರ್ಶಿಗಳು ಮತ್ತು ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ: 114 |
| 3 | ಅಪ್ಪುರಾಜ್ | ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣೆ-ಶಾಂತಿನಗರ ವಿಭಾಗ |
| 4 | ಆರ್. ಜಗದೀಶ್ | ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯು.ಎಸ್.ಎಸ್.ಬಿ. |
| 5 | ಕೆ. ನಾಗರಾಜ | ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯು.ಎಸ್.ಎಸ್.ಬಿ. |
| 6 | ಶ್ರೀನಿವಾಸ್ | ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯು.ಎಸ್.ಎಸ್.ಬಿ. |
| 7 | ಸಿ ನಂಜುಂಡಯ್ಯ | ಕಿರಿಯ ಅಭಿಯಂತರರು, ಬೋರ್‌ವೆಲ್ |
| 8 | ಎಲ್. ಸಗಯನಾಥನ್ | ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ಸಂಖ್ಯೆ: 114 |
| 9 | ಬಿ ಚಂದ್ರಶೇಖರ್ | ಸಹಾಯಕ ಅಭಿಯಂತರರು, ಬೃಹತ್ ನೀರುಗಾಲುವೆ, ಬಿಬಿಎಂಪಿ |
| 10 | ಪ್ರಭು ಬಿ ಸಿ | ಕೆಲಸ ಪರಿವೀಕ್ಷಕರು ವಾರ್ಡ್ ಸಂಖ್ಯೆ: 114 |
| 11 | ದೇವರಾಜು | ಅರಣ್ಯ ಇಲಾಖೆ (ಪೂರ್ವ) |
| 12 | ಮಂಜಪ್ಪ ಹೆಚ್. ಎಸ್. | ಸಹಾಯಕ ಅಭಿಯಂತರರು ಸ್ಟ್ರೀಟ್ ಲೈಟ್ ವಿಭಾಗ, ಬಿಬಿಎಂಪಿ |

| ವಾರ್ಡ್ ಸಮಿತಿ ಸಭೆಯಲ್ಲಿ ಹಾಜರಿದ್ದ ಸಮಿತಿ ಸದಸ್ಯರು ಮತ್ತು ಸಾರ್ವಜನಿಕರು | | |
|---|---|---|
| 1 | ರಾಧ | ವಾರ್ಡ್ ಸಮಿತಿ ಸದಸ್ಯರು |
| 2 | ಭವಾನಿ | ವಾರ್ಡ್ ಸಮಿತಿ ಸದಸ್ಯರು |
| 3 | ವಸಂತ | ವಾರ್ಡ್ ಸಮಿತಿ ಸದಸ್ಯರು |
| 4 | ಪುರುಷೋತ್ತಮ | ವಾರ್ಡ್ ಸಮಿತಿ ಸದಸ್ಯರು |
| 5 | ಸರವಣ | ವಾರ್ಡ್ ಸಮಿತಿ ಸದಸ್ಯರು |
| 6 | ನಂಧ ಪಿ.ಕೆ | ವಾರ್ಡ್ ಸಮಿತಿ ಸದಸ್ಯರು |
| 7 | ರಾಜಕುಟ್ಟಿ | ವಾರ್ಡ್ ಸಮಿತಿ ಸದಸ್ಯರು |
| 8 | ಗೀತ ಶ್ರೀನಿವಾಸ್ | ವಾರ್ಡ್ ಸಮಿತಿ ಸದಸ್ಯರು (ಜೀವನಕೇಂದ್ರ ಬಡಾವಣೆ ಅಸೋಸಿಯೇಷನ್) |

ದಿನಾಂಕ: 06-01-2021 ರಂದು ಪೂರ್ವಾಹ್ನ 11-00 ಗಂಟೆಗೆ ವಾರ್ಡ್ ಸಂಖ್ಯೆ: 114 ಅಗರಂ ವಾರ್ಡಿನ ವಾರ್ಡ್ ಸಮಿತಿ ಸಭೆಯನ್ನು ಪ್ರಾರಂಭಿಸಲಾಯಿತು.

ಶ್ರೀ. ಡಿ. ಮೂರ್ತಿ, ಕಾರ್ಯದರ್ಶಿಗಳು ಮತ್ತು ವಾರ್ಡಿನ ಸಹಾಯಕ ಅಭಿಯಂತರರು ಸಭೆಗೆ ಆಗಮಿಸಿದ್ದ ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳನ್ನು ಮತ್ತು ವಾರ್ಡ್ ಸಮಿತಿ ಸದಸ್ಯರುಗಳನ್ನು, ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಹಾಗೂ ವಾರ್ಡಿನ ನಿವಾಸಿಗಳನ್ನು ಸಭೆಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಿದರು.

ಸಭೆಯ ಪ್ರಾರಂಭದಲ್ಲಿ, ಕಾರ್ಯದಶಿಗಳು ಹಿಂದಿನ ಸಭೆಯ ನಡವಳಿಗಳನ್ನು ಓದಿದರು, ಮತ್ತು ಹಿಂದಿನ ಸಭೆಯಲ್ಲಿ ಸಾರ್ವಜನಿಕರು ತಿಳಿಸಿದ ಸಮಸ್ಯೆಗಳ ಬಗ್ಗೆ ಕೈಗೊಂಡಿರುವ ಕ್ರಮಗಳನ್ನು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳ ಸಭೆಗೆ ವಿವರಿಸಿದರು.

**ಇಂದು ನಡೆದ ಸಭೆಯಲ್ಲಿ ಪ್ರಮುಖವಾಗಿ ಕೆಳಕಂಡ ವಿಷಯಗಳನ್ನು ಚರ್ಚಿಸಲಾಯಿತು.**

1. ಶ್ರೀ. ಮೋಹನ್ ರವರು ತಿಳಿಸಿದ ಸಮಸ್ಯೆಗಳು:
    a. ಗೌತಮಪುರ ಪೀಲೆ ಪ್ರತಿಮೆ ಹತ್ತಿರ ಡೆಬ್ರಿಸ್ ತೆರವು ಮಾಡುವ ಬಗ್ಗೆ.
    b. ಗೌತಮಪುರದಲ್ಲಿ ಮರ ಬಿದ್ದಿರುವ ಬಗ್ಗೆ.
    c. ಆರ್ಟಿಲರಿ ರಸ್ತೆಯಲ್ಲಿರುವ ಬೋರ್‌ವೆಲ್ ರಿಪೇರಿ ಬಗ್ಗೆ.
    d. ಆರ್ಟಿಲರಿ ರಸ್ತೆಯಲ್ಲಿ ಹೊಸದಾಗಿ ಅಳವಡಿಸಿರುವ ಟಿ.ಸಿ. ಯಿಂದ ಆಗುತ್ತಿರುವ ಸಮಸ್ಯೆಯ ಕುರಿತು.
    e. ಗೌತಮಪುರದಲ್ಲಿ ನಿರ್ವಹಿಸುತ್ತಿರುವ ಸ್ಯಾನಿಟರಿ ಕೆಲಸದ ಕುರಿತು.
    f. ಗೌತಮಪುರದಲ್ಲಿರುವ ಪಾಲಿಕೆಯ ಜಾಗವನ್ನು ಒತ್ತುವರಿ ಮಾಡಿಕೊಂಡಿರುವ ಬಗ್ಗೆ.
    g. ಗೌತಮಪುರ ಪಾರ್ಕ್‌ನ ನಿರ್ವಹಣೆ ಕುರಿತು.
    h. ಗೌತಮಪುರ 1ನೇ ಕ್ರಾಸ್ ನೀರಿನ ಸಮಸ್ಯೆ.
    i. ಗೌತಮಪುರದ 2ನೇ ಮುಖ್ಯರಸ್ತೆಯಿಂದ 9ನೇ ಕ್ರಾಸ್‌ವರೆಗೆ ಸ್ಯಾನಿಟರಿ ಲೈನ್ ಕಾಮಗಾರಿ ನಿರ್ವಹಿಸಿ 1 ವರ್ಷ ಕಳೆದರು ರಸ್ತೆ ಸರಿಪಡಿಸಿರುವುದಿಲ್ಲ.
2. ಯಾಕುಬ್ ರಾಹುತ್ ರವರು ಸಲ್ಲಿಸಿರುವ ಮನವಿ:
    a. ಗೌತಮಪುರದಲ್ಲಿರುವ ಬೀದಿ ದೀಪಗಳ ನಿರ್ವಹಣೆಯ ಬಗ್ಗೆ.
    b. ಗೌತಮಪುರದಲ್ಲಿ ಶಿವ ದೇವಸ್ಥಾನದ ಹತ್ತಿರ ಕಲುಷಿತ ನೀರು ಸರಬರಾಜು ಆಗುತ್ತಿರುವ ಬಗ್ಗೆ.
    c. ಗೌತಮಪುರ ಶಿವ ದೇವಸ್ಥಾನದ ಹತ್ತಿರ ಇರುವ ಪಾಲಿಕೆಯ ಜಾಗವವನ್ನು ಒತ್ತುವರಿ ಮಾಡಿರುವ ಬಗ್ಗೆ.
    d. ಗೌತಮಪುರ ಶಿವ ದೇವಸ್ಥಾನದ ರಸ್ತೆಯಲ್ಲಿರುವ ಟ್ರಾನ್ಸ್‌ಫಾರ್ಮರ್ ಸ್ಥಳಾಂತರಿಸುವ ಕುರಿತು.
3. ರಾಜಕುಟ್ಟಿ ರವರು ಸಲ್ಲಿಸಿರುವ ಮನವಿ:
    a. ಆಸ್ಟಿನ್‌ಟೌನ್ ಸೌತ್ ರಸ್ತೆಯಲ್ಲಿ ಅನಧಿಕೃತವಾಗಿ ಕ್ಯಾಟಲ್ ಶೆಡ್ ನಿರ್ಮಿಸಿಕೊಂಡಿರುವ ಬಗ್ಗೆ.

## ವಾರ್ಡ್ ಸಮಿತಿ ಸಭೆಯ ನಡಾವಳಿಗಳು

| ಕ್ರ. ಸಂ | ಚರ್ಚಿಸಿದ ವಿಷಯಗಳು | ಕೈಗೊಳ್ಳಬೇಕದ ಕ್ರಮ | ಕ್ರಮಕೈಗೊಳ್ಳಬೇಕಾದ ಅಧಿಕಾರಿಗಳ ವಿವರ |
|---|---|---|---|
| 1 | **ಶ್ರೀ. ಮೋಹನ್ ರವರು ತಿಳಿಸಿದ ಸಮಸ್ಯೆಗಳು:**<br>a. ಗೌತಮಪುರ ಪೀಲೆ ಪ್ರತಿಮೆ ಹತ್ತಿರ ಡೆಬ್ರಿಸ್ ತೆರವು ಮಾಡುವ ಬಗ್ಗೆ. | ನೋಡಲ್ ಅಧಿಕಾರಿಗಳು ವಾರ್ಡಿನ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ರವರಿಗೆ ಕೂಡಲೇ ತೆರವು ಮಾಡುವಂತೆ ಸೂಚಿಸಿದರು. | ಶ್ರೀ. ಟಿ. ಡಿ. ಮಂಜುನಾಥ<br>ಸಹಾಯಕ ಕಾರ್ಯಪಾಲಕ ಅಭಿಯಂತರರು<br>ಬಿ.ಬಿ.ಎಂ.ಪಿ.<br>9845894584 |
| | b. ಗೌತಮಪುರದಲ್ಲಿ ಮರ ಬಿದ್ದು ತುಂಬಾ ದಿನ ಕಳೆದರು ಇದುವರೆಗೂ ತೆರವುಗೊಳಿಸುವುದಿಲ್ಲವೆಂದು ತಿಳಿಸಿದರು. | ನೋಡಲ್ ಅಧಿಕಾರಿಗಳು ಪಾಲಿಕೆಯ ಅರಣ್ಯ ಇಲಾಖೆಯ ಸಿಬ್ಬಂಧಿ ಶ್ರೀ. ದೇವರಾಜ್ ರವರಿಗೆ ಕೂಡಲೇ ತೆರವು ಮಾಡುವಂತೆ ನಿರ್ದೇಶಿಸಿದರು. | ಶ್ರೀ ದೇವರಾಜ್<br>ಅರಣ್ಯ ಇಲಾಖೆ ಸಿಬ್ಬಂದಿ<br>9741112446 |
| | c. ಆರ್ಟಿಲರಿ ರಸ್ತೆಯಲ್ಲಿರುವ ಬೋರ್‌ವೆಲ್ ರಿಪೇರಿ ಆಗುತ್ತಿರುತ್ತದೆ ಈ ಸಮಸ್ಯೆ ಪರಿಹರಿಸುವಂತೆ ಕೋರಿರುತ್ತಾರೆ. | ನೋಡಲ್ ಅಧಿಕಾರಿಗಳು, ಬಿ.ಡಬ್ಲ್ಯು.ಎಸ್.ಎಸ್.ಬಿ. ಇಲಾಖೆಯ ಬೋರ್‌ವೆಲ್ ವಿಭಾಗದ ಇಂಜಿನಿಯರ್ ಆದ ಶ್ರೀ. ನಂಜುಂಡಯ್ಯ ರವರಿಗೆ ಸಮಸ್ಯೆ ಪರಿಹರಿಸಲು ಅಗತ್ಯ ಕ್ರಮಕೈಗೊಳ್ಳುವಂತೆ ಸೂಚಿಸಿದರು. | ಸಿ. ನಂಜುಂಡಯ್ಯ<br>ಬಿ.ಡಬ್ಲ್ಯು.ಎಸ್.ಎಸ್.ಬಿ.<br>(ಬೋರ್‌ವೆಲ್) |
| | d. ಆರ್ಟಿಲರಿ ರಸ್ತೆಯಲ್ಲಿ ಹೊಸದಾಗಿ ಅಳವಡಿಸಿರುವ ಟ್ರಾನ್ಸ್‌ಫಾರ್ಮರ್‌ನಿಂದ ಆಗುತ್ತಿರುವ ಸಮಸ್ಯೆ ಕುರಿತು. | ಬೆಸ್ಕಾಂ ಅಧಿಕಾರಿಗಳು ಸಭೆಯಲ್ಲಿ ಹಾಜರಿಲ್ಲದ ಕಾರಣ, ಬೆಸ್ಕಾಂ ಅಧಿಕಾರಿಗಳಿಗೆ ಕೂಡಲೇ ಸ್ಥಳ ಪರಿಶೀಲನೆ ಮಾಡಿ, ಸಮಸ್ಯೆ ಬಗೆಹರಿಸಲು ಕ್ರಮಕೈಗೊಳ್ಳುವಂತೆ ಸೂಚಿಸಲಾಗುವುದು ಎಂದು ನೋಡಲ್ ಅದಿಕಾರಿಗಳು ಸಭೆಗೆ ತಿಳಿಸಿದರು. | ಶ್ರೀ ರುದ್ರಮುನಿ<br>ಸಹಾಯಕ ಇಂಜಿನಿಯರ್<br>ಬೆಸ್ಕಾಂ |
| | e. ಗೌತಮಪುರ ವ್ಯಾಪ್ತಿಯಲ್ಲಿ ಬಿ.ಡಬ್ಲು.ಎಸ್.ಎಸ್.ಬಿ. ಇಲಾಖೆಯಿಂದ ಸ್ಯಾನಿಟರಿ ಪೈಪ್‌ಲೈನ್ ಕೆಲಸವನ್ನು ಪ್ರಾರಂಭಿಸಿ 2 ತಿಂಗಳು ಕಳೆದರು, ಇದುವರೆಗೂ ಪೂರ್ಣಗೊಳಿಸಿರುವುದಿಲ್ಲವೆಂದು ಮೋಹನ್ ರವರು ಆಕ್ಷೇಪ ವ್ಯಕ್ತಪಡಿಸಿರುತ್ತಾರೆ. | ಈ ಕುರಿತು ಮಾತನಾಡಿದ ಬಿ.ಡಬ್ಲ್ಯು.ಎಸ್.ಎಸ್.ಬಿ. ಇಲಾಖೆಯ ಅಧಿಕಾರಿಗಳು, ಕೂಡಲೇ ಕಾಮಗಾರಿ ಪೂರ್ಣಗೊಳಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು. | ನಾಗರಾಜ್<br>ಸಹಾಯಕ ಕಾರ್ಯಪಾಲಕ ಅಭಿಯಂತರರು,<br>ಬಿ.ಡಬ್ಲ್ಯು.ಎಸ್.ಎಸ್.ಬಿ |
| | f. ಗೌತಮಪುರದ ಪೀಲೆ ಪ್ರತಿಮೆ ಹತ್ತಿರ ಮತ್ತು ಆರ್ಟಿಲರಿ ರಸ್ತೆ 3ನೇ ಅಡ್ಡರಸ್ತೆಯಲ್ಲಿರುವ ಪಾಲಿಕೆಯ ಜಾಗವನ್ನು ಅನಧಿಕೃತವಾಗಿ ಆಕ್ರಮಿಸಿಕೊಂಡಿದ್ದು, ಇದನ್ನು ಕೂಡಲೇ ತೆರವು ಮಾಡುವಂತೆ ಕೋರಿದರು. | ಈ ಬಗ್ಗೆ ನೋಡಲ್ ಅಧಿಕಾರಿಗಳು ಪಾಲಿಕೆಯ ಸಹಾಯಕ ಕಾರ್ಯಪಾಲಕ ಅಭಿಯಂತರರು, ದೊಮ್ಮಲೂರು ಉಪ ವಿಭಾಗ ರವರಿಗೆ ಕೂಡಲೇ ತೆರವು ಮಾಡಲು ಕ್ರಮಕೈಗೊಳ್ಳುವಂತೆ ಸೂಚಿಸಿದರು. | ಶ್ರೀ. ಟಿ. ಡಿ. ಮಂಜುನಾಥ<br>ಸಹಾಯಕ ಕಾರ್ಯಪಾಲಕ ಅಭಿಯಂತರರು<br>ಬಿ.ಬಿ.ಎಂ.ಪಿ.<br>9845894584 |
| | g. ಗೌತಮಪುರದ ಫುಟ್‌ಬಾಲ್ ಗ್ರೌಂಡ್‌ನ ಹತ್ತಿರ ಇರುವ ಪಾರ್ಕ್‌ನ್ನು ಯಾರು ಸರಿಯಾಗಿ ನಿರ್ವಹಿಸುತ್ತಿರುವುದಿಲ್ಲ. ಆದ್ದರಿಂದ ಕೂಡಲೇ ಇದನ್ನು ಸಮರ್ಪಕವಾಗಿ ಅಭಿವೃದ್ಧಿಪಡಿಸಬೇಕೆಂದು ಕೋರಿದರು. | ಪಾಲಿಕೆಯ ಪೂರ್ವ ವಲಯದ ತೋಟಗಾರಿಕ ಅಧೀಕ್ಷಕರಿಗೆ ಈ ಕುರಿತು ಕ್ರಮಕೈಗೊಳ್ಳಲು ತಿಳಿಸುವುದಾಗಿ, ನೋಡಲ್ ಅಧಿಕಾರಿಗಳು ಸಭೆಗೆ ತಿಳಿಸಿದರು. | ತೋಟಗಾರಿಕಾ ಅಧೀಕ್ಷಕರು<br>(ಪೂರ್ವ)<br>ಬಿ.ಬಿ.ಎಂ.ಪಿ |

| | | | |
|---|---|---|---|
| | **h.** ಗೌತಮಪುರ 1ನೇ ಕ್ರಾಸ್ ಕ್ರಾಸ್‌ನಲ್ಲಿ ನೀರಿನ ಸಮಸ್ಯೆ ಹೆಚ್ಚಾಗಿದ್ದು, ಇದನ್ನು ಕೂಡಲೇ ಪರಿಹರಿಸುವಂತೆ ಕೋರಿರುತ್ತಾರೆ. | ಸಭೆಯಲ್ಲಿದ್ದ ಬಿ.ಡಬ್ಲ್ಯು.ಎಸ್.ಎಸ್.ಬಿ. ಇಲಾಖೆಯ ಅಧಿಕಾರಿಗಳು ಕೂಡಲೆ ಪರಿಶೀಲಿಸಿ ಸಮಸ್ಯೆ ಪರಿಹರಿಸಲಾಗುವುದು ಎಂದು ತಿಳಿಸಿದರು. | ನಾಗರಾಜ್ ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯು.ಎಸ್.ಎಸ್.ಬಿ |
| | **i.** ಗೌತಮಪುರದ 2ನೇ ಮುಖ್ಯರಸ್ತೆಯಿಂದ 9ನೇ ಕ್ರಾಸ್‌ವರೆಗೆ ಸ್ಯಾನಿಟರಿ ಲೈನ್ ಕಾಮಗಾರಿ ನಿರ್ವಹಿಸಿ 1 ವರ್ಷ ಕಳೆದರು ರಸ್ತೆ ಸರಿಪಡಿಸಿರುವುದಿಲ್ಲವೆಂದು ತಿಳಿಸಿದರು. | ವಾರ್ಡಿನ ಸಹಾಯಕ ಇಂಜಿನಿಯರ್ ರವರು ಅನುದಾನ ಲಭ್ಯತೆಯನ್ನು ಪರಿಶೀಲಿಸಿ ಕೂಡಲೇ ರಸ್ತೆ ಅಭಿವೃದ್ಧಿ ಕಾಮಗಾರಿ ನಿರ್ವಹಿಸಲಾಗುವುದು ಎಂದು ತಳಿಸಿದರು. | ಶ್ರೀ. ಟಿ. ಡಿ. ಮಂಜುನಾಥ ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಬಿ.ಎಂ.ಪಿ. 9845894584 |
| 2 | **ಯಾಕುಬ್ ರಾಹುತ್ ರವರು ತಿಳಿಸಿದ ಸಮಸ್ಯೆಗಳು:**<br>a. ಗೌತಮಪುರದಲ್ಲಿರುವ ಬೀದಿ ದೀಪಗಳ ನಿರ್ವಹಣೆಯು ಸಮರ್ಪವಾಗಿರುವುದಿಲ್ಲ ಎಂದು ತಿಳಿಸಿರುತ್ತಾರೆ.. | ಶ್ರೀ ಮಂಜಪ್ಪ, ಕಿರಿಯ ಅಭಿಯಂತರರು, ಪಾಲಿಕೆಯ ವಿದ್ಯುತ್ ವಿಭಾಗ ರವರು ಮಾತನಾಡಿ ಕೂಡಲೇ ಸ್ಥಳ ಪರಿಶೀಲನೆ ಮಾಡಿ ಬೀದಿ ದೀಪಗಳನ್ನು ಬದಲಾಯಿಸುವುದಾಗಿ ತಿಳಿಸಿರುತ್ತಾರೆ. | ಶ್ರೀ. ಮಂಜಪ್ಪ ಕಿರಿಯ ಅಭಿಯಂತರರು ವಿದ್ಯುತ್ ವಿಭಾಗ, ಬಿ.ಬಿ.ಎಂ.ಪಿ. |
| | b. ಗೌತಮಪುರದಲ್ಲಿ ಶಿವ ದೇವಸ್ಥಾನದ ಹತ್ತಿರ ಕಲುಷಿತ ನೀರು ಸರಬರಾಜು ಆಗುತ್ತಿದ್ದು, ಇದರಿಂದ ಇಲ್ಲಿನ ನಿವಾಸಿಗಳು ಅನಾರೋಗ್ಯ ಸಮಸ್ಯೆ ಎದುರಿಸ ಬೇಕಾಗಿರುತ್ತದೆ ಎಂದು ತಿಳಿಸಿ ಸಮಸ್ಯೆ ಪರಿಹರಿಸುವಂತೆ ಕೋರಿರುತ್ತಾರೆ. | ಈ ಬಗ್ಗೆ ನೋಡಲ್ ಅಧಿಕಾರಿಗಳು, ಕೂಡಲೇ ಕಲುಷಿತ ನೀರು ಸರಬರಾಜು ಆಗುತ್ತಿರುವುದನ್ನು ಸರಿಪಡಿಸುವಂತೆ ಬಿ.ಡಬ್ಲ್ಯು.ಎಸ್.ಎಸ್.ಬಿ. ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು. | ಶ್ರೀ. ನಾಗರಾಜ್ ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯು.ಎಸ್.ಎಸ್.ಬಿ |
| | c. ಗೌತಮಪುರ ಶಿವ ದೇವಸ್ಥಾನದ ಹತ್ತಿರ ಇರುವ ಪಾಲಿಕೆಯ ಜಾಗವನ್ನು ಅನಧಿಕೃತವಾಗಿ ಆಕ್ರಮಿಸಿಕೊಂಡಿರುವ ಬಗ್ಗೆ ತಿಳಿಸಿ, ತೆರವು ಮಾಡುವಂತೆ ಕೋರಿರುತ್ತಾರೆ. | ಈ ಬಗ್ಗೆ ನೋಡಲ್ ಅಧಿಕಾರಿಗಳು ಪಾಲಿಕೆಯ ಸಹಾಯಕ ಕಾರ್ಯಪಾಲಕ ಅಭಿಯಂತರರು, ದೊಮ್ಮಲೂರು ಉಪ ವಿಭಾಗ ರವರಿಗೆ ಕೂಡಲೇ ತೆರವು ಮಾಡಲು ಕ್ರಮಕೈಗೊಳ್ಳುವಂತೆ ಸೂಚಿಸಿದರು. | ಶ್ರೀ. ಟಿ. ಡಿ. ಮಂಜುನಾಥ ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಬಿ.ಎಂ.ಪಿ. 9845894584 |
| | d. ಗೌತಮಪುರ ಶಿವ ದೇವಸ್ಥಾನದ ರಸ್ತೆಯಲ್ಲಿರುವ ಟ್ರಾನ್ಸ್‌ಫಾರ್ಮರ್‌ನಿಂದ ಇಲ್ಲಿನ ನಿವಾಸಿಗಳಿಗೆ ಬಹಳ ತೊಂದರೆಯಾಗುತ್ತಿದ್ದು, ಇದನ್ನು ಸ್ಥಳಾಂತರಿಸುವಂತೆ ಕೋರಿರುತ್ತಾರೆ. | ಬೆಸ್ಕಾಂ ಇಲಾಖೆಯ ಅಧಿಕಾರಿಗಳು ಸಭೆಯಲ್ಲಿ ಹಾಜರಿಲ್ಲದ ಕಾರಣ, ನೋಡಲ್ ಅಧಿಕಾರಿಗಳು ಸಮಸ್ಯೆಯನ್ನು ಪರಿಹರಿಸಲು ಬೆಸ್ಕಾಂ ಇಲಾಖೆ ಅಧಿಕಾರಿಗಳಿಗೆ ತಿಳಿಸುವುದಾಗಿ ಸಭೆಯಲ್ಲಿ ತಿಳಿಸಿದರು. | ಶ್ರೀ ರುದ್ರಮುನಿ ಸಹಾಯಕ ಇಂಜಿನಿಯರ್ ಬೆಸ್ಕಾಂ |
| 3 | **ರಾಜಕುಟ್ಟಿ ರವರು ಸಲ್ಲಿಸಿರುವ ಮನವಿ:**<br>a. ಆಸ್ಟಿನ್‌ಟೌನ್ ಸೌತ್ ರಸ್ತೆಯಲ್ಲಿ ಅನಧಿಕೃತವಾಗಿ ಕ್ಯಾಟಲ್ ಶೆಡ್ ನಿರ್ಮಿಸಿಕೊಂಡಿರುವುದನ್ನು ತೆರವು ಮಾಡಿಸುವಂತೆ ಕೋರಿರುತ್ತಾರೆ. | ಈ ಬಗ್ಗೆ ನೋಡಲ್ ಅಧಿಕಾರಿಗಳು ಪಾಲಿಕೆಯ ಸಹಾಯಕ ಕಾರ್ಯಪಾಲಕ ಅಭಿಯಂತರರು, ದೊಮ್ಮಲೂರು ಉಪ ವಿಭಾಗ ರವರಿಗೆ ಕೂಡಲೇ ತೆರವು ಮಾಡಲು ಕ್ರಮಕೈಗೊಳ್ಳುವಂತೆ ಸೂಚಿಸಿದರು. | ಶ್ರೀ. ಟಿ. ಡಿ. ಮಂಜುನಾಥ ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಬಿ.ಎಂ.ಪಿ. 9845894584 |

ಸಭೆಯ ಅಂತ್ಯದಲ್ಲಿ ಶ್ರೀ. ರಾಜಕುಟ್ಟಿ ರವರು ಮಾತನಾಡಿ, ಸಭೆಗೆ ಎಲ್ಲಾ ಅಧಿಕಾರಿಗಳು ಹಾಜರಾದಲ್ಲಿ ಜನರ ಸಮಸ್ಯೆಯನ್ನು ಪರಿಹರಿಸಲು ಸಾಧ್ಯವಾಗುತ್ತದೆ, ಆದ್ದರಿಂದ ಮುಂದಿನ ಸಭೆಗೆ ಎಲ್ಲಾ ಅಧಿಕಾರಿಗಳು ಸಭೆಯಲ್ಲಿ ಹಾಜರಾಗಲು ಕ್ರಮಕೈಗೊಳ್ಳುವಂತೆ ನೋಡಲ್ ಅಧಿಕಾರಿಗಳಲ್ಲಿ ಮನವಿ ಮಾಡಿದರು.

ಕೊನೆಯದಾಗಿ ಕಾರ್ಯದರ್ಶಿಯವರು ಸಭೆಗೆ ಹಾಜರಾಗಿದ್ದ ಅಧಿಕಾರಿಗಳಿಗೆ ಮತ್ತು ಸಮಿತಿಯ ಸದಸ್ಯರುಗಳಿಗೆ ಹಾಗೂ ಸಾರ್ವಜನಿಕರಿಗೆ ವಂದಿಸಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳ ಅಪ್ಪಣೆಯ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ ಮತ್ತು ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ: 114 ಅಗರಂ
ಬಿ.ಬಿ.ಎಂ.ಪಿ

ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ: 114 ಅಗರಂ
ಬಿ.ಬಿ.ಎಂ.ಪಿ

ಪ್ರತಿಯನ್ನು:

1. ಮಾನ್ಯ ಆಡಳಿತಗಾರರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
2. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
3. ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ಸಲ್ಲಿಸಿದೆ.
4. ಜಂಟಿ ಆಯುಕ್ತರು (ಪೂರ್ವ) ರವರ ಅವಗಾಹನೆಗೆ ಸಲ್ಲಿಸಿದೆ.
5. ಮಾನ್ಯ ಮುಖ್ಯ ಅಭಿಯಂತರರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
6. ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
7. **ಸದರಿ ಸಭೆಯ ನಡಾವಳಿ ಪ್ರತಿಯನ್ನು ಸಭೆಗೆ ಹಾಜರಾಗಿದ್ದ ಎಲ್ಲಾ ಇಲಾಖೆಯ ಅಧಿಕಾರಿಗಳಿಗೆ ಕಳುಹಿಸಿಕೊಡುತ್ತಾ, ಸಭೆಯಲ್ಲಿ ಸಾರ್ವಜನಿಕರು ಮತ್ತು ವಾರ್ಡ್ ಸಮಿತಿ ಸದಸ್ಯರುಗಳು ಚರ್ಚಿಸಿದ ವಿಷಯದ ಬಗ್ಗೆ ಹಾಗೂ ಸಮಸ್ಯೆಗಳನ್ನು ಬಗೆಹರಿಸಲು ಕೈಗೊಂಡ ಕ್ರಮಗಳ ಸಂಪೂರ್ಣ ವಿವರವನ್ನು ಲಿಖಿತ ರೂಪದಲ್ಲಿ ಸದಸ್ಯ ಕಾರ್ಯದರ್ಶಿ ಮತ್ತು ಸಹಾಯಕ ಅಭಿಯಂತರರ ಕಛೇರಿಗೆ ಸಲ್ಲಿಸಲು ಈ ಮೂಲಕ ಎಲ್ಲಾ ಇಲಾಖೆಯ ಅಧಿಕಾರಿಗಳಲ್ಲಿ ಕೋರಿದೆ.**
8. ಕಛೇರಿ ಪ್ರತಿ.